# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಗುರುವಾರ ೨೦, ನವೆಂಬರ್, ೨೦೨೫ (ಕಾರ್ತಿಕಾ , ೨೯, ಶಕವರ್ಷ, ೧೯೪೭)<br>BENGALURU, THURSDAY 20, NOVEMBER, 2025 ( KARTHIKA , 29, SHAKAVARSHA, 1947) | ನಂ. ೭೪೭<br>No. 747 |
|---|---|---|


**<u>ಕರ್ನಾಟಕ ಸರ್ಕಾರ</u>**

ಸಂಖ್ಯೆ:ಸಿಆಸುಇ 12 ಎಆರ್‌ಬಿ 2025

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ,
ಡಾ|| ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:20.11.2025

**<u>ಅಧಿಸೂಚನೆ</u>**

ಭಾರತ ಸಂವಿಧಾನದ 166ನೇ ಅನುಚ್ಛೇದದ ಕಲಂ (2) ಮತ್ತು (3) ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲರು, ಕರ್ನಾಟಕ ಸರ್ಕಾರ (ಕೆಲಸಗಳ ಹಂಚಿಕೆ) ನಿಯಮಗಳು, 1977, ಇದಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಕೆಳಕಂಡ ನಿಯಮಗಳನ್ನು ಈ ಮೂಲಕ ರಚಿಸಿದ್ದಾರೆ. ಎಂದರೆ,-

**<u>1. ಶೀರ್ಷಿಕೆ ಮತ್ತು ಪ್ರಾರಂಭ:-</u>** 1) ಈ ನಿಯಮಗಳನ್ನು ಕರ್ನಾಟಕ ಸರ್ಕಾರ (ಕೆಲಸಗಳ ಹಂಚಿಕೆ) (ತಿದ್ದುಪಡಿ) ನಿಯಮಗಳು, 2025 ಎಂದು ಕರೆಯತಕ್ಕದ್ದು.

2) ಇವುಗಳು, ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. <u>ಅನುಸೂಚಿ II ಕ್ಕೆ ತಿದ್ದುಪಡಿ</u>**, - ಕರ್ನಾಟಕ ಸರ್ಕಾರದ (ಕೆಲಸಗಳ ಹಂಚಿಕೆ) ನಿಯಮಗಳು, 1977ರ (ಇನ್ನು ಮುಂದೆ ಸದರಿ ನಿಯಮಗಳೆಂದು ಕರೆಯಲಾಗುವ) ಅನುಸೂಚಿ II ರಲ್ಲಿ, **"ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ"** ಶೀರ್ಷಿಕೆಯ ಅಡಿಯಲ್ಲಿ **"ಆರ್. ಹೈದ್ರಾಬಾದ್-ಕರ್ನಾಟಕ ವಿಶೇಷ ಕೋಶ"** ಉಪಶೀರ್ಷಿಕೆ ಮತ್ತು ಅದರ ನಮೂದುಗಳನ್ನು ಕೈಬಿಡತಕ್ಕದ್ದು.

**3. <u>ಅನುಸೂಚಿ XIIಕ್ಕೆ ತಿದ್ದುಪಡಿ,</u>** - ಸದರಿ ನಿಯಮಗಳ ಅನುಸೂಚಿ XIIರಲ್ಲಿ **"ಯೋಜನೆ, ಕಾರ್ಯಕ್ರಮ, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ"** ಶೀರ್ಷಿಕೆಯ ಅಡಿಯಲ್ಲಿ ಉಪ ಶೀರ್ಷಿಕೆ **'ಎ'** ರಡಿ ಕ್ರಮ ಸಂಖ್ಯೆ 2 ಮತ್ತು ಅದರ ನಮೂದುಗಳನ್ನು ಕೈಬಿಡತಕ್ಕದ್ದು.

**4. <u>ಹೊಸ ಅನುಸೂಚಿ XXIX ರ ಸೇರ್ಪಡೆ</u>**, - ಸದರಿ ನಿಯಮಗಳ ಅನುಸೂಚಿ XXVIII ರ ನಂತರ, ಈ ಕೆಳಕಂಡದ್ದನ್ನು ಸೇರ್ಪಡೆ ಮಾಡತಕ್ಕದ್ದು, ಎಂದರೆ,-

**"ಅನುಸೂಚಿ XXIX**

**ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಇಲಾಖೆ**

**ಎ. ಕಲ್ಯಾಣ ಕರ್ನಾಟಕ**

1. ಶಿಕ್ಷಣ ಇಲಾಖೆ ಮತ್ತು ಕಾರ್ಮಿಕ ಇಲಾಖೆಗೆ ಹಂಚಿಕೆಯಾದ ವಿಷಯಗಳನ್ನು ಹೊರತುಪಡಿಸಿ, ಭಾರತ ಸಂವಿಧಾನದ 371(ಜೆ) ವಿಧಿಯ ಅನುಷ್ಠಾನಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳು.

2. ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013 ರ ಆಡಳಿತಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳು.

3. ಆಯವ್ಯಯ ಒಳಗೊಂಡಂತೆ ಹೈದರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಆದೇಶ, 2013 ರ ವಿವಿಧ ಉಪಬಂಧಗಳನ್ನು ಒಳಗೊಂಡ ಹೈದರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಕಾರ್ಯನಿರ್ವಹಣೆಯ ಯೋಜನೆ ಮತ್ತು ಉಸ್ತುವಾರಿ.

**ಬಿ. ಸಂಹಿತೆಗಳು ಮತ್ತು ಕೈಪಿಡಿಗಳು**

ತನ್ನ ಆಡಳಿತ ನಿಯಂತ್ರಣದಲ್ಲಿರುವ ಇಲಾಖೆಗಳಿಗೆ ಸಂಬಂಧಿಸಿದ ಸಂಹಿತೆಗಳನ್ನು ಮತ್ತು ಕೈಪಿಡಿಗಳನ್ನು ಸಿದ್ಧಪಡಿಸುವುದು.

**ಸಿ. ನೌಕರಿ ಭರ್ತಿ ನಿಯಮಗಳು ಮತ್ತು ನೇಮಕಗಳು**

1. ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಇಲಾಖೆಯ ಆಡಳಿತ ನಿಯಂತ್ರಣದ ಅಡಿಯಲ್ಲಿ ಒಳಪಡುವ ಸೇವೆಗಳಿಗೆ ಮತ್ತು ಹುದ್ದೆಗಳಿಗೆ ಸಂಬಂಧಿಸಿದ ನೌಕರಿ ಭರ್ತಿ ನಿಯಮಗಳು.

2. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಅಡಿಯಲ್ಲಿ ಬರುವವರನ್ನು ಹೊರತುಪಡಿಸಿ, ಈ ಇಲಾಖೆಯ ಆಡಳಿತ ನಿಯಂತ್ರಣದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಮತ್ತು ಸಿಬ್ಬಂದಿವರ್ಗದವರ ನೇಮಕಗಳು, ಸ್ಥಳ ನಿಯುಕ್ತಿಗಳು, ವರ್ಗಾವಣೆಗಳು, ರಜೆ, ಮೊದಲಾದವುಗಳು.

ಸಹಿ/-
(ಥಾವರ್‌ಚಂದ್ ಗೆಹ್ಲೋಟ್)
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

(ನಾಗರತ್ನ ವಿ.ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-2)

# KARNATAKA GOVERNMENT

No: DPAR 12 ARB 2025

Karnataka Government Secretariat,
Vidhanasoudha,
Dr. B.R. Ambedkar Veedhi,
Bengaluru, Dated:20.11.2025.

## NOTIFICATION

In exercise of the powers conferred by clauses (2) and (3) of Article 166 of Constitution of India, the Governor of Karnataka hereby makes the following rules further to amend the Karnataka Government (Allocation of Business) Rules, 1977, namely :-

**1. Title and Commencement :-** 1) These rules may be called the Karnataka Government (Allocation of Business) (Amendment) Rules, 2025.

2) They shall come into force from the date of their publication in the Official Gazette.

**2. Amendment of Schedule II:-** In the Karnataka Government (Allocation of Business) Rules, 1977, (hereinafter referred to as the said rules), in SCHEDULE II under the heading " **Department of personnel and Administrative Reforms**", the sub-heading "**R. Hyderabad-Karnataka Special Cell"** and entries relating thereto shall be omitted.

**3. Amendment of Schedule XII:-** In the said rules, in schedule XII under the heading "**Planning, Programme Monitoring and Statistics Department**", under sub-heading "**A",** Serial number 2 and the entries relating thereto shall be omitted.

**4. Insertion of New Schedule XXIX:-** In the said rules, after schedule XXVIII, the following shall be inserted, namely, -

### "SCHEDULE XXIX

### KALYANA KARNATAKA REGION DEVELOPMENT DEPARTMENT

### A. Kalyana Karnataka.

1. All matters connected with the implementation of Article 371(J) of the Constitution of India other than the matters allocated to Education Department and Labour Department.

2. All matters pertaining to Administration of the Karnataka Public Employment (Reservation in appointment for Hyderabad-Karnataka Region) Order, 2013.

3. Planning and monitoring the functioning of Hyderabad-Karnataka Region Development Board including budget and various provisions contained in the Hyderabad-Karnataka Region Development Board Order, 2013.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



### B. Codes and Manuals

Preparation of Codes and Manuals in respect of Departments under its administrative control.

### C. Recruitment Rules and Appointments

1. Recruitment Rules relating to the services and posts under the administrative control of Kalyana Karnataka Region Development Department.
2. Appointments, postings, transfers, leave, etc., to the officers and staff working under its administrative control except those falling under the Department of Personnel and Administrative Reforms."

Sd/-
(THAAWARCHAND GEHLOT)
GOVERNOR OF KARNATAKA.

By Order and in the name of the
Governor of Karnataka

(Nagarathna V. Patil)
Under Secretary to Government
Department of Personnel and Administrative
Reforms (Service Rules-2)

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH